ದೃಷ್ಟಾಂತದಲ್ಲಿ ಬದಲಾದಂತೆ ವಾಸ್ತವದಲ್ಲೂ ಬದಲಾಗಿದೆ ಎಂದೇ ಅನಿಸುತ್ತದೆ. ಅಂದರೆ, ಮೊದಲೆಲ್ಲಾ ಈ ಬಿಗ್ ಬಾಸ್ ಅನ್ನುವವ ಕೈಗೆ ಸಿಗುತ್ತಿದ್ದ. ಆದರೆ, ಇಂದು ಆತನಿಗೊಂದು ಮೂರ್ತರೂಪವೆಂಬುದೇ ಇಲ್ಲ. ಒಂದು ಸಣ್ಣ ಉದಾಹರಣೆ ನೋಡೋಣ. ನನ್ನ ಮಿತ್ರನೊಬ್ಬ ಸಣ್ಣ ಉದ್ಯಮಿ. ಹೆಸರಾಂತ ಮಲ್ಟಿನ್ಯಾಷಲ್ ಕಂಪನಿಯೊಂದರಿಂದ ಆತನಿಗೆ ಒಂದು ಲಕ್ಷ ಚಿಲ್ಲರೆ ಹಣ ಸಂದಾಯವಾಗಬೇಕಿದೆ. ಕಳೆದ ಎರಡು ವರ್ಷಗಳಿಂದ ಆತ ಆ ಸಣ್ಣ ಮೊತ್ತ ಪಡೆಯುವುದಕ್ಕಾಗಿ ಹೆಣಗಾಡುತ್ತಿದ್ದಾನೆ. ಆ ಕಚೇರಿಯಲ್ಲಿ ಇರುವವರೆಲ್ಲರೂ ನೌಕರರು. ಅವರ ಕೈಲೇನೂ ಇಲ್ಲ. ಅವರ ರೀಜನಲ್ ಡೈರಕ್ಟರನನ್ನು ಸಂಪರ್ಕಿಸಿದರೂ ಯಾವುದೇ ಪ್ರತಿಕ್ರಿಯೆಯಿಲ್ಲ. ಹಾಗೆ ನೋಡಿದರೆ, ಡೈರಕ್ಟರನಿಗೂ ಪೂರ್ಣ ಅಧಿಕಾರವಿಲ್ಲ. ಆ ಕಂಪನಿಯ ಮಾಲೀಕನನ್ನು ಹುಡುಕಿ ಹೊರಟರೆ ಅಲ್ಲಿ 'ಇವನೇ ಮಾಲೀಕ' ಎಂಬುವನೂ ಇಲ್ಲ. ಹತ್ತಾರು ಬೋರ್ಡ್ ಮೆಂಬರುಗಳಿದ್ದಾರೆ. ಅವರೆಲ್ಲರನ್ನು ಒಂದೆಡೆ ನಿಲ್ಲಿಸಿ ಕೇಳಬಹುದೇ? ಅದೂ ಸಾಧ್ಯವಿಲ್ಲ, ಯಾಕೆಂದರೆ ಅವರೆಲ್ಲ ಸೇರಿದಮೇಲೂ ಆ ಕಂಪನಿಯ ಉಳಿದರ್ಧ ಪಾಲನ್ನು ಯಾವುದೋ ವಿದೇಶೀ ಬ್ಯಾಂಕೊಂದು ಖರೀದಿಸಿದೆ. ಆ ಬ್ಯಾಂಕಿನಲ್ಲಿ ಜಗತ್ತಿನ ಸಹಸ್ರಾರು ಜನರ ಹೂಡಿಕೆಯಿದೆ. ಆ ಬಹುರಾಷ್ಟ್ರೀಯ ಕಂಪನಿ, ಎಲ್ಲೆಲ್ಲಿಂದಲೋ ಸಾವಿರಾರು ಕೋಟಿ ರೂಪಾಯಿ 'ಫಂಡ್ ರೈಸ್' ಮಾಡಿರುವ ಸುದ್ದಿಯನ್ನು ನನ್ನ ಮಿತ್ರ ಪತ್ರಿಕೆಯಲ್ಲಿ ಓದಿದ್ದಾನೆ. ಆದರೆ, ತನಗೆ ಬರಬೇಕಾದ ಲಕ್ಷ ರೂಪಾಯಿಗೆ ಬಾಧ್ಯಸ್ಥನಾಗಬಹುದಾದ ವ್ಯಕ್ತಿ ಮಾತ್ರ ಆತನಿಗೆ ದೊರಕುತ್ತಿಲ್ಲ.

ಮಿತ್ರನ ವ್ಯವಹಾರದ ಉದಾಹರಣೆ ಮಾತ್ರವೆಂದಲ್ಲ – ಯಾವುದೇ ಮಲ್ಟಿ ಸ್ಪೆಶಾಲಿಟಿ ಆಸ್ಪತ್ರೆಯಾಗಲೀ, ದೊಡ್ಡ ರೀಟೇಲ್ ಅಂಗಡಿಯಾಗಲಿ, ಡಿಜಿಟಲ್ ಬ್ಯಾಂಕಿಂಗ್ ಆಗಲಿ, ವಿಮಾ ಕಂಪನಿಯಾಗಲಿ, ನಿಮಗಾದ ಕುಂದು ಕೊರತೆ ಅಥವಾ ನಷ್ಟವನ್ನು ನೀವು ಕೆಳಮಟ್ಟದಲ್ಲೇ ನಿವಾರಿಸಿಕೊಂಡರೆ ವಾಸಿ. ಇಲ್ಲಾಗದಿದ್ದರೆ ಮೇಲಿನ ಹಂತದಲ್ಲಿ ಇತ್ಯರ್ಥ ಮಾಡಿಕೊಳ್ಳುವೆನೆಂದು ಹೊರಟರೆ, ನಿಮಗಲ್ಲಿ ಆ ಮೇಲಿನ ವ್ಯಕ್ತಿ ಎಂಬುವವನನ್ನು ಎದುರುಗೊಳ್ಳಲೇ ಸಾಧ್ಯವಾಗಲಿಕ್ಕಿಲ್ಲ. ಅಲ್ಲಿ ವೈಯಕ್ತಿಕವಾಗಿ ಯಾರೂ ಯಾವುದಕ್ಕೂ ಪೂರ್ಣ ಜವಾಬ್ದಾರರಲ್ಲ. ಜವಾಬ್ದಾರನಾಗಬೇಕಿದ್ದ 'ಬಿಗ್ ಬಾಸ್' ಯಾರೆಂದು ಕಂಡುಹಿಡಿಯಲಾಗುವುದಿಲ್ಲ; ಅಥವಾ ಆತನಿಗೊಂದು ವ್ಯಕ್ತಿಗತ ರೂಪವೇ ಇಲ್ಲ.

ಹಿಂದಾದರೆ ಹಾಗಿರಲಿಲ್ಲ ನೋಡಿ. ನಮಗೆ ಅನ್ಯಾಯವೆಸಗಿದ ಜಮೀನ್ದಾರನನ್ನೋ ಊರ ಒಡೆಯನನ್ನೋ ಕಷ್ಟಪಟ್ಟಾದರೂ ಕೊರಳ ಪಟ್ಟಿ ಹಿಡಿದು ನಿಲ್ಲಿಸುವ ಕ್ಷಣಿಕ ಸಾಧ್ಯತೆಯಾದರೂ ಇತ್ತು. ಕಾದು ಕೂತು ಫ್ಯಾಕ್ಟರಿಯ ಮಾಲೀಕನ ಕಾರನ್ನು ಅಡ್ಡಗಟ್ಟಬಹುದಿತ್ತು. ಏನೂ ಸಾಧ್ಯವಾಗದಿದ್ದರೂ ಅವರೆದುರು ಕೂಗಾಡಿ ಕೊನೇಪಕ್ಷ ಆಕ್ರೋಶವನ್ನಾದರೂ ಹೊರಗೆಡವಬಹುದಿತ್ತು. ಹಾಕಿದ ಶಾಪ ಆತನಿಗೇ ತಟ್ಟುತ್ತದೆಂಬ ಭ್ರಮೆಯಲ್ಲಾದರೂ ಬದುಕಬಹುದಿತ್ತು. ಇಂದು, ನಾವು ಎಷ್ಟೇ ಅರಚಾಡಿದರೂ ಗಾಜಿನ ಪರದೆಯ ಆಚೆಯ ನೌಕರ ತನ್ನ ಲ್ಯಾಪ್‌ಟಾಪಿನಲ್ಲಿ ಫೇಸ್‌ಬುಕ್ ನೋಡುತ್ತ ಕೇಳಿಸಿಕೊಂಡಾನೇ ಹೊರತೂ ಮತ್ತೇನೂ ಆಗಲಿಕ್ಕಿಲ್ಲ. ನಮ್ಮ ಆಕ್ರೋಶಕ್ಕೊಂದು ತಂಗುದಾಣವೂ ಇರದ ಸ್ಥಿತಿ.

ವಿಚಿತ್ರವೆಂದರೆ, ನಮ್ಮ ಕೈಗೆಲ್ಲೂ ಸಿಗದ, ಕಣ್ಣಿಗೂ ಕಾಣದ ಈ 'ಬಿಗ್ ಬಾಸ್', ಅನೇಕ ಸಂಗತಿಗಳಲ್ಲಿ ನಮ್ಮನ್ನು ಆತನ ತಾಳಕ್ಕೆ ತಕ್ಕಂತೆ ಕುಣಿಸುತ್ತಿದ್ದಾನೆ. ಸೂಕ್ಷ್ಮವಾಗಿ ಯೋಚಿಸಿ ನೋಡಿ – ನೀವು ಪರ ಊರಿಗೆ ಹೋದಾಗ ಯಾವ ಹೊಟೇಲಿನಲ್ಲಿ ಉಳಿಯಬೇಕು, ನಿಮ್ಮ ಮಗುವನ್ನು ಯಾವ ಶಾಲೆಗೆ ಸೇರಿಸಬೇಕು, ನಿಮ್ಮ ಕುಟುಂಬಕ್ಕೆ ಯೋಗ್ಯವಾದ ಇನ್‌ಶೂರೆನ್ಸ್ ಪ್ಲಾನ್ ಯಾವುದು, ಇತ್ಯಾದಿಗಳ ಆಯ್ಕೆ ಹಾಗೂ ನಿರ್ಣಯ ಸಂಪೂರ್ಣವಾಗಿ ನಿಮ್ಮೊಳಗೇ ಹುಟ್ಟಿದ್ದೇ? ಅಥವಾ ಹಲವು ಹತ್ತು